ನನಗ್ಯಾಕೋ ಒಂಚೂರು ಅಸ್ವಸ್ಥತಾ ಅನ್ನಿಸಲಿಕ್ಕ ಹತ್ತೇದ. ಇವರನ್ನು ಕೋಣೆಗೆ ಕರೆದೊಯ್ಯಾ" ಅಂತ ಜೋರಾಗಿ ಕೂಗಿ, ಕೋಣೆಗೆ ಹೋಗಿ ರಪ್ಪನೆ ಬಾಗಿಲು ಹಾಕಿಕೊಂಡುಬಿಟ್ಟ. ನಳಿನಿ ಗಾಬರಿಯಾಗಿ, "ಏನಾತ್ರಿ? ಏನಾತ್ರಿ" ಅಂತ ಬಾಗಿಲು ದಬದಬ ಬಾರಿಸಿದಳು.

"ನನಗೇನೂ ಧಾಡ್ಯಾಗಿಲ್ಲ, ಅಪ್ಪಾ ಇನ್ನೂ ಬಚ್ಚಲದಾಗ ಟವಲ್ ಸುತ್ತಿಕೊಂಡು ಕೂತಾರ, ಅವರನ್ನು ಕೋಣೆಗೆ ಕರಕೊಂಡು ಹೋಗು" ಅಂತರಚಿ ಸಿಗರೇಟಿಗಾಗಿ ಹುಡುಕಾಡಿದ. ಲೈಟರಿನ ಜ್ವಾಲೆಗೆ ಭುಸ್ಸೆಂದು ಮೇಲಕ್ಕೆದ್ದ ಸಿಗರೇಟಿನ ದಟ್ಟ ಬಿಳಿ ಹೊಗೆಯುಂಗುರಗಳು ಥೇಟ್ ಅಪ್ಪನ ಬಿಳಿಕೂದಲಂತೆಯೇ ಕಂಡವು. ಥಟ್ಟನೆ ತನ್ನ ಈ ಏಕದಂ ಅಸ್ವಸ್ಥತೆಗೆ ಕಾರಣ ಇಂಜಿನಿಯರಿಂಗ್ ಸೀಟು ಕಳಕೊಂಡ ನೋವಲ್ಲ, ತನ್ನ ಭವಿಷ್ಯ ಹಾಳಾದದ್ದೇ ಅಪ್ಪನಿಂದ ಎನ್ನುವ ಮಾತೂ ಅಲ್ಲ, ಅವರಿಗೆ ಹಿಂದಿನದ್ಯಾವುದೂ ನೆನಪೇ ಇಲ್ಲ ಅನ್ನುವ ವಿಚಿತ್ರ ಹತಾಶೆಯೂ ಅಲ್ಲ. ಬದಲಿಗೆ, ಇದೀಗ ಅವರ ಮುಖದ ಬೆವರನ್ನು ಮೆತ್ತಗೆ ಒರೆಸುವಾಗ ತನ್ನಾವರಿಸಿಕೊಂಡ ಎಂಥದೋ ಕೋಮಲ ಅನುಭೂತಿ ಅಂತರಿವಾದಾಗ ನಿರ್ವಿಣ್ಣನಾಗಿ ಹೋದ ರಮೇಶ.

ಆದರೂ ಹಟಕ್ಕೆ ಬಿದ್ದವನಂತೆ ಅವರ ತಪ್ಪುಗಳನ್ನು ನೆನಪಿಸಿಕೊಳ್ಳತೊಡಗಿದ. 'ಆದರ್ಶವನ್ನು ಬರಿದೇ ಮನೆಮಂದಿಯನ್ನು ಹತೋಟಿಯಲ್ಲಿರಿಸಲು ಅಸ್ತ್ರದಂತೆ ಬಳಸಿದ್ದೇನು ಕಡಿಮೆ ಅಪರಾಧವೇ? ಮಗನ ಏಳಿಗೆಗೆ ಹಣಸಹಾಯ ಮಾಡದ್ದೇನು ಕ್ಷಮಿಸುವ ತಪ್ಪೇ' ಅಂತ ವಕೀಲನಂತೆ ಪಾಯಿಂಟು ಹಾಕಿಕೊಳ್ಳತೊಡಗಿದರೆ, "ನಿನ್ನಕ್ಕನ ಲಗ್ನಕ್ಕೆಂದು ಮಾಡಿದ ಸಾಲ ಇನ್ನೂ ಅದ ಅಂತ ಇವರು ರಾತ್ರೆಲ್ಲ ನಿದ್ದೀ ಮಾಡಂಗಿಲ್ಲೋ ರಮೇಶಾ" ಅನ್ನುತ್ತಿದ್ದ ಅವ್ವನ ಸೋತ ಮುಖ, ಅಪ್ಪನ ಅಲ್ಲಲ್ಲಿ ಗಂಟು ಹಾಕಿದ ಧೋತರ, ಮಾಮಾನ ಮನೆಯಿಂದ ಆಗಾಗ ಅವ್ವ ತರುತ್ತಿದ್ದ ಜೋಳದ ಚೀಲ, 'ಚರಕಾ ಹಿಡಿದವರಿಗೆ ಕಾವಿನೂ ಹಾಕ್ಕೊಂಡುಬಿಡಲು ಹೇಳಿರಿ, ಸನ್ಯಾಸಿಗಳಿಗೆ ಸಂಸಾರ ಯಾಕೋ?' ಅಂತ ಹಂಗಿಸುತ್ತಲೇ ಚೀಲಕ್ಕೆ ಕಾಳು ತುಂಬುತ್ತಿದ್ದ ಮಾಮಿ, ಹೀಗೆ ಏನೇನೋ ಬೇರೇಯೇ ಚಿತ್ರಗಳು ಕಣ್ಮುಂದೆ ಬಂದವು. ಅಪ್ಪ ಎಲ್ಲ ಮರೆತಿದ್ದಾರೆಯೆ? ಅಥವಾ ಅವರ ದೃಷ್ಟಿಯಲ್ಲಿ ನೆನಪಿಡುವಂಥಾದ್ದೇನೂ ಘಟಿಸಲೇ ಇಲ್ಲವೆ? ತಮ್ಮ ಬದುಕನ್ನು ಅವರು ತಮಗೆ ಸರಿ ಕಂಡಂತೆ ಬದುಕಿದರು. ತಾನೂ ಕೆಲ ಕಾಲ ಅದರ ಭಾಗವಾಗಿದ್ದೆ – ಅಲ್ಲಿಗೆ ಪೂರ್ಣವಿರಾಮ. ಅಷ್ಟೆಯೆ? ಅಷ್ಟಾಗ್ಯೂ ಅವರೇನು ಹಣ ಉಳಿಸಿ ತಮಗಾಗಿ ಮಹಲು ಕಟ್ಟಿಕೊಂಡರೆ? ಇಲ್ಲ, ಕುಡಿದು ಜೂಜಾಡಿ ರೊಕ್ಕ ಹಾಳು ಮಾಡಿದರೆ? ಬದುಕಿಡೀ ಅವರಿಗೆ ಬೇಕಾಗಿದ್ದು ಎರಡೊತ್ತು ಹೊಟ್ಟೆ ತುಂಬ ರುಚಿಕಟ್ಟಾದ ಊಟ, ಎರಡು ಜೋಡಿ ಧೋತರ, ಒಂದು ಜೋಡು ಚಪ್ಪಲಿ, ಇಷ್ಟೇ.

ಹದಿನೈದು ವರ್ಷ ಹಿಂದಿನ ಘಟನೆಗಳೆಲ್ಲ ಇಂದು ಹೀಗೆ ಬೇರೆಯಾಗಿ ತಟ್ಟಿದ ರೀತಿಗೆ ಥಕ್ಕಾದ ರಮೇಶನಿಗೆ ಆ ದಿನವಿಡೀ ಬ್ಯಾಂಕಿನಲ್ಲಿ ಯಾವ ಕೆಲಸದಲ್ಲೂ ಮನಸ್ಸು ಹತ್ತಲಿಲ್ಲ. ಏನೋ ಹಳಹಳಿ. 'ಹಾಗಾದರೆ ನಳಿನಿ ಅಂದು ರಾತ್ರಿ ಹೇಳದೆ ಬಿಟ್ಟ ಅರ್ಧ ಬದುಕಿಗೆ, ನನ್ನ ಹಾಳಾದ ಹಗಲುಗಳಿಗೆ ನಾನೇ ಹೊಣೆಯೆ? ಅಪ್ಪ ಡೊನೇಶನ್ ಕೊಡೂದಿಲ್ಲ ಅಂದಾಗ ಸಂತಾಪದಿಂದ ಉರಿಯುವ ಬದಲು, "ಅಪ್ಪಾ ನಾ ಇನ್ನೊಮ್ಮೆ ಅಕ್ಟೋಬರ್ ಚಾನ್ಸಿಗೆ ಪರೀಕ್ಷಾ ಕಟ್ಟಿ ಛಲೋ ಮಾರ್ಕ್ಸ್ ತಗೋತೀನಿ" ಅಂತ ಯಾಕನ್ನಲಿಲ್ಲ? ಅಥವಾ ಬಿ.ಎಸ್ಸಿ. ಆದ ಮೇಲೂ ಎಷ್ಟೋ ಮಂದಿ ಮಾಡುವಂತೆ ಬೇರೆ ಬೇರೆ ಕೋರ್ಸುಗಳಿಗೆ ಹೋಗಲು ಯಾರಡ್ಡಿಯಿತ್ತು? ಪಣ ತೊಟ್ಟವನಂತೆ ಡಿಪಾರ್ಟ್‌ಮೆಂಟಿನ ಪರೀಕ್ಷೆ ಕಟ್ಟಿ ಆಫೀಸರೇಕೆ ಆಗಲಿಲ್ಲ?' ಅಂತ ಎಂದೂ ಕೇಳಿಕೊಳ್ಳದ ಪ್ರಶ್ನೆಗಳನ್ನು ಸ್ವತಕ್ಕೆ ಕೇಳಿಕೊಂಡ. ಹಗಲಿಡೀ ಫೈಲಿನಲ್ಲಿ ಕಳಕೊಳ್ಳೋದು, ಸಂಜೆಗೆ ಖಾಲಿ ಕುಳಿತು ನೆನಪುಗಳನ್ನು ಅಗೆಯೋದು ಇದರಲ್ಲೇ ನಾಲ್ವತ್ತಾಗಿ ಹೋಗಿದ್ದು ಇಂದೇ ಅರಿವಿಗೆ ಬಂದಂತೆ ಮೊಬೈಲು ಹೊರ ತೆಗೆದು, ಕ್ಯಾಮೆರಾ ಸೆಲ್ಫಿಗೆ ತಿರುಗಿಸಿಕೊಂಡು ತನ್ನ ಮುಖದ ಗೆರೆಗಳನ್ನೇ ದಿಟ್ಟಿಸಿದ.